**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಜಗಳೂರು**

**ಸಿ ಸಿ ನಂ:258/2017**

**ಚಾಸಾ-28/ಪ್ರಾಸಾ-10**

**ಮಾನ್ಯ ಉಚ್ಚ ನ್ಯಾಯಾಲಯ ವಿಸಿ ನಿಯಮಾವಳಿ 2020 ರ ಅಡಿಯಲ್ಲಿ ಸಾಕ್ಷಿಯನ್ನು ವಿಸಿಯ ಮೂಲಕ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ದಿನಾಂಕ:27.06.2026.**

ಹೆಸರು : ಕೊಟ್ರೇಶಿ ಬಿ ಎಂ ತಂದೆ ಮಹಾಂತಪ್ಪ

ವಯಸ್ಸು : **47** ವರ್ಷ

ಉದ್ಯೋಗ : ಪಿ ಐ ಪಾವಗಡ ಪೋಲೀಸ್ ಠಾಣೆ

ವಿಳಾಸ : ಪಾವಗಡ

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದ:**

ನಾನು ದಿ: **20.06.2014** ರಿಂದ ದಿ: **10.07.2016** ರವರೆಗೆ ಜಗಳೂರು ಪೋಲೀಸ್ ಠಾಣೆಯಲ್ಲಿ ಪೋಲೀಸ್ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿ: **30.06.2016** ಈ ಪ್ರಕರಣದ ಕಡತವನ್ನು ಚಾಸಾ-**27** ಇವರಿಂದ ಪಡೆದುಕೊಂಡು ಮುಂದಿನ ತನಿಖೆಯನ್ನು ಕೈಗೊಂಡಿರುತ್ತೇನೆ. ನಂತರ ಅದೇ ದಿನ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿರುತ್ತೇನೆ . ಬೆರಳಚ್ಚು ತಜ್ಞರು ಮತ್ತು ಶ್ವಾನದಳದವರಿಂದ ಕರೆಸಿಕೊಂಡು ಚಾಸಾ-**2** ಮತ್ತು **3** ರವರ ಸಮಕ್ಷಮ ಚಾಸಾ-**1** ರವರು ತೋರಿಸಿದ ಸ್ಥಳದಲ್ಲಿ ದೇವಸ್ಥಾನ ಮತ್ತು ಶಿವಣ್ಣಗೌಡರವರ ಹೋಲದಲ್ಲಿ ಪಂಚನಾಮೆಯನ್ನುಜರುಗಿಸಿರುತ್ತೇನೆ . ಈಗ ಸಾಕ್ಷಿಗೆ ನಿಪಿ **11** ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದು ಮತ್ತು ಅದರಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು ಅದನ್ನು ನಿಪಿ **11(ಬಿ)** ಎಂದು ಗುರುತಿಸಲಾಯಿತು . ನಂತರ ನಿಪಿ **11** ಪಂಚನಾಮೆ ಕಾಲಕ್ಕೆ

ಪೋಟೋಗಳನ್ನು ತಗೆದಿರುತ್ತೇವೆ . ಅವುಗಳನ್ನು ಈಗಾಗಲೇ ನಿಪಿ **12** ರಿಂದ **16** ಎಂದು ಗುರುತಿಸಲಾಗಿರುತ್ತದೆ . ನಂತರ ಚಾಸಾ **-12** ರಿಂದ **18** ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ . ನಂತರ ಚಾಸಾ**-16** ರಿಂದ **18** ರವರ ಮರುಹೇಳಿಕೆ ಪಡೆದುಕೊಂಡಿರುತ್ತೇನೆ . ಸದರಿ ಪಂಚನಾಮೆ ಕಾಲದಲ್ಲಿ ನಾವು ಆರೋಪಿಗಳು ದೇವಸ್ಥಾನದಲ್ಲಿ ಕಳ್ಳತನವಾದ ಹುಂಡಿಯನ್ನು ಬಿಟ್ಟು ಹೋಗಿರುವ ಬಗ್ಗೆ ಪಂಚನಾಮೆ ಮಾಡಿರುತ್ತೇವೆ . ನಂತರ ಮುಂದಿನ ತನಿಖೆಗೆ ಈ ಪ್ರಕರಣದ ಕಡತವನ್ನು **29** ರವರಿಗೆ ವರ್ಗಾಹಿಸಿರುತ್ತೇನೆ .

**ಪಾಟೀ ಸವಾಲುಃ-ಆರೋಪಿ ಪರ H.N., ವಕೀಲರಿಂದಃ**

ನಾವು ಪಂಚನಾಮೆ ಮಾಡಿದ ಶಿವಣ್ಣಗೌಡರ ಅಡಿಕೆ ತೋಟದ ಸರ್ವೆ ನಂಬರ್ ನನಗೆ ಹೇಳಲು ಬರುವುದಿಲ್ಲ. ನಾನು ಯಾವುದೇ ಸ್ಥಳಕ್ಕೆ ಹೋಗಿರುವುದಿಲ್ಲ ನಿಪಿ **11** ರಂತೆ ಪಂಚನಾಮೆ ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ **12** ರಿಂದ **16** ಪೋಟೋಗಳನ್ನು ತಗೆದಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ**-12** ರಿಂದ **18** ನನಗೆ ಯಾವುದೇ ಹೇಳಿಕೆ ಮತ್ತು ಮರುಹೇಳಿಕೆ ನೀಡಿರುವುದಿಲ್ಲ ಈ ಪ್ರಕರಣಕ್ಕೆ ಅನುಕೂಲವಾಗುವಂತೆ ನಾನೇ ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿರುತ್ತಾರೆ**.)**

ಓ ಹೇ ಕೇ ಸರಿ ಇದೆ

**Sd/-**

ಪ್ರ.ದ.ನ್ಯಾ.ದಂ., ಜಗಳೂರು